

ನೋವುಗಳಿದ್ದರೂ ಮಕ್ಕಳೆದುರು ಪ್ರಕಟಪಡಿಸದೆ, ಅವರ ಬೇಕು ಬೇಡಗಳನ್ನು ಪೂರೈಸುತ್ತಾ ಸುಸಂಸ್ಕೃತ ನಾಗರಿಕರನ್ನಾಗಿ ರೂಪಿಸಬೇಕಾದ ತಂದೆಯ ಜವಾಬ್ದಾರಿಗಳು ಒಬ್ಬ ತಂದೆಗಷ್ಟೇ ಗೊತ್ತಿರುತ್ತದೆ ಮತ್ತು ಎಳವೆಯಿಂದಲೇ ತಂದೆಯ ಪ್ರೀತಿಯಿಂದ ವಂಚಿತರಾಗಿ ಬೆಳೆದ ನನ್ನಂಥ ಮಕ್ಕಳಿಗಷ್ಟೇ ತಂದೆಯ ಮಹತ್ವದ ಅರಿವಿರುತ್ತದೆ.

ತಾಯಿಯ ಸ್ಥಾನದಲ್ಲಿದ್ದುಕೊಂಡು, ಪ್ರೀತಿಯ ಧಾರೆಯೆರೆದು ಮಗುವನ್ನು ಪೋಷಿಸಿದ ಎಷ್ಟೋ ವಿಧುರರ ನಿದರ್ಶನಗಳಿವೆ. ದೂರದ ದೇಶದಲ್ಲಿ ನೆಲೆಸಿರುವ ಮಗ 'ಆಗ ಬಂದಾನು, ಈಗ ಬಂದಾನು' ಎಂಬ ನಿರೀಕ್ಷೆಯಲ್ಲೇ ಇಹಲೋಕ ತ್ಯಜಿಸಿದ ತಂದೆಯಂದಿರ ನಿದರ್ಶನಗಳಿವೆ. ತನ್ನ ಹೆಣ್ಣುಮಗುವನ್ನು ಗಂಡುಮಗುವಿಗೆ ಸರಿಸಮನಾಗಿ ಬೆಳೆಸಿ, ಬದುಕು ರೂಪಿಸಿದ ತಂದೆಯಂದಿರ ನಿದರ್ಶನಗಳಿವೆ. ಗಣಿಯಾಳಕ್ಕಿಳಿದು, ಗಗನಚುಂಬಿ ಕಟ್ಟಡಗಳ ಮೇಲೆ ನಿಂತು, ಹಿಮಾಚ್ಛಾದಿತ ಪರ್ವತಗಳಲ್ಲಿ ಬಂದೂಕಿನ ಗುಂಡುಗಳಿಗೆ ಎದೆಯೊಡ್ಡಿ, ಗಂಟೆಗಟ್ಟಲೆ ಯಂತ್ರಗಳ ಮುಂದೆ ಬೆವೆತು, ಹೊಲಗದ್ದೆಗಳಲ್ಲಿ ಬಿಸಿಲು ಮಳೆಗೆ ದೇಹವನ್ನೊಡ್ಡಿ, ರಾತ್ರಿಯೆಲ್ಲಾ ನಿದ್ದೆಗೆಟ್ಟು ವಾಹನ ಚಾಲನೆ ಮಾಡಿ, ಮೈ ಕೈಗೆಲ್ಲಾ ಹೊಲಸು ಮೆತ್ತಿಸಿಕೊಂಡು, ತಮ್ಮ ಆರೋಗ್ಯಪ್ರಾಣಗಳನ್ನು ಪಣಕ್ಕೊಡ್ಡಿ ಅಪ್ಪಂದಿರು ದುಡಿಯುವುದು ತಮ್ಮ ಹೊಟ್ಟೆ ತುಂಬಿಸುವ ಸಲುವಾಗಿ ಮತ್ತು ತಮ್ಮ ಭವಿಷ್ಯವನ್ನು ಸುಗಮಗೊಳಿಸುವ ಸಲುವಾಗಿ ಎಂಬುದನ್ನು ಮಕ್ಕಳು ಅರಿಯುವುದೊಳಿತು. ಅಪ್ಪ ತಾನು ದುಡಿದದ್ದನ್ನು ತನಗೋಸ್ಕರ ಖರ್ಚು ಮಾಡುವುದು ತೀರಾ ನಗಣ್ಯವೆನಿಸುವಷ್ಟು. ಅಬ್ಬಬ್ಬಾ ಎಂದರೆ ಕೆಲಸದ ವೇಳೆಯಲ್ಲಿ ಕಾಫಿ, ತಿಂಡಿಗಾಗಿ ಒಂದಿಷ್ಟು ಖರ್ಚು ಮಾಡಿಯಾನು. ಕೆಲವರು ತಮಗಂಟಿಕೊಂಡ ಚಟಗಳಿಗೆ ಒಂದಿಷ್ಟು ಖರ್ಚು ಮಾಡಿಯಾರು ಅಷ್ಟೆ.

ಎಲ್ಲೋ ಒಬ್ಬೊಬ್ಬ ಕೆಟ್ಟ ತಂದೆ ಇದ್ದಾನು. ಆದರೆ ಒಬ್ಬ ಕಠೋರ ಮನಸ್ಸಿನ ತಂದೆಯ ಹೃದಯವೂ ತನ್ನ ಮಗುವಿಗಾಗಿ ಮಿಡಿಯುತ್ತಿರುತ್ತದೆ. ಅಪ್ಪ ಬೈಯುವುದಾಗಲೀ ಗದರುವುದಾಗಲೀ ತಮ್ಮನ್ನು ತಿದ್ದುವ ಸಲುವಾಗಿಯಷ್ಟೆ ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳಬೇಕು. ಮಗು ಮೂಗುನೋವು ಎಂದರೂ ಗಳಗಳನೆ ಅತ್ತುಬಿಡುವ ಹೆಂಗರುಳಿನ ಅಪ್ಪಂದಿರನ್ನು ನೋಡಿದ್ದೇನೆ. ಮಗುವಿನ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗೂ ವೈದ್ಯರ ಬಳಿ ಎಡತಾಕುವ ಸೂಕ್ಷ್ಮ ಮನಸ್ಸಿನ ಅಪ್ಪಂದಿರನ್ನು ನೋಡಿದ್ದೇನೆ. ಮದುವೆಯಾಗಿ ಹಲವು ವರ್ಷಗಳ ನಂತರವೂ ತಂದೆ ಎನಿಸಿಕೊಳ್ಳದಿದ್ದುದಕ್ಕಾಗಿ ಸಾಕಷ್ಟು ಪರಿತಪಿಸಿ, ಪಡಿಪಾಟಲುಪಟ್ಟು ಯಶಸ್ವಿಯಾದ ಅಪ್ಪಂದಿರನ್ನು ನೋಡಿದ್ದೇನೆ. ಸತತ ಪ್ರಯತ್ನಗಳ ನಂತರವೂ ಅಪ್ಪ ಎನಿಸಿಕೊಳ್ಳಲಾಗದ ತಮ್ಮ ದುರ್ವಿಧಿಯನ್ನು ಹಳಿಯುತ್ತಾ ಜೀವ ಸವೆಸುವವರನ್ನು ನೋಡಿದ್ದೇನೆ. ದತ್ತುಮಗುವನ್ನು ಮತ್ತು ಮಲಮಗುವನ್ನು ಹೆತ್ತಮಗುವಿನಂತೆಯೇ ಪ್ರೀತಿಸಿ, ಪೋಷಿಸುವ ಅಪ್ಪಂದಿರನ್ನು ನೋಡಿದ್ದೇನೆ. ಅಂಥ ಅಪ್ಪ ತನ್ನನ್ನು ಎತ್ತಿ ಆಡಿಸಿದ್ದನ್ನು, ಪುಟ್ಟ ಬೆರಳು ಹಿಡಿದುಕೊಂಡು ಬೀದಿಯಲ್ಲಿ ಸುತ್ತಾಡಿಸಿದ್ದನ್ನು, ಹೆಗಲ ಮೇಲೆ ಕೂರಿಸಿಕೊಂಡು ಜಾತ್ರೆಸಂತೆಗಳನ್ನು ತೋರಿಸಿದ್ದನ್ನು, ಹ್ಯಾಂಡಲ್ ಹಿಡಿದುಕೊಂಡು ಸೈಕಲ್ ಕಲಿಸಿದ್ದನ್ನು, ಬೆನ್ನ ಮೇಲೆ ಕೂರಿಸಿಕೊಂಡು ಸವಾರಿ ಮಾಡಿಸಿದ್ದನ್ನು, ಹೊಟ್ಟೆಯ ಮೇಲೆ ಕೂರಿಸಿಕೊಂಡು ಎದೆಗೆ ಗುದ್ದಿಸಿಕೊಂಡಿದ್ದನ್ನು ಮರೆತವರು ಮಕ್ಕಳೆನ್ನಿಸಿಕೊಳ್ಳಲು ಅನರ್ಹರು.

ಹಿಂದೊಮ್ಮೆ ಅಂಚೆಯೇ ಪ್ರಮುಖ ಸಂಪರ್ಕ ಸಾಧನವಾಗಿದ್ದಾಗ, ಪತ್ರದ ಆರಂಭದಲ್ಲಿ 'ತೀರ್ಥರೂಪ ತಂದೆಯವರಿಗೆ' ಎಂದು ಬರೆಯಲಾಗುತ್ತಿತ್ತು. ರಾಮಾಯಣ ಮಹಾಭಾರತಗಳಲ್ಲಿ ತಂದೆಯ ಪ್ರೀತಿ ಎಂಥದ್ದೆಂಬುದನ್ನು ಧೃತರಾಷ್ಟ್ರ, ದ್ರೋಣ, ದಶರಥರಂಥ ಪಾತ್ರಗಳು ನಿರೂಪಿಸಿವೆ. ಇನ್ನು ಸಿನಿಮಾ ಪ್ರಪಂಚಕ್ಕೆ ಬಂದರೆ ಅಪ್ಪ ಎಂದೊಡನೆ ಥಟ್ಟನೆ ನೆನಪಿಗೆ ಬರುವುದು 'ದೇವತಾ ಮನುಷ್ಯ' ಚಿತ್ರದ ರಾಜ್ ಕುಮಾರ್, 'ಬಂಗಾರದ ಪಂಜರ' ಚಿತ್ರದ ಅಶ್ವಥ್ ಮತ್ತು 'ಬಡವರ ಬಂಧು' ಚಿತ್ರದ ಸಂಪತ್. ಈ ಮಹನೀಯರೆಲ್ಲರೂ ಹಲವಾರು ಚಿತ್ರಗಳಲ್ಲಿ ತಂದೆಯ ಪಾತ್ರಕ್ಕೆ ಜೀವ ತುಂಬಿದವರು. ಎ.ಎನ್ ಮೂರ್ತಿರಾಯರು ತಮ್ಮ 'ದೇವರು' ಕೃತಿಯಲ್ಲಿ "ಒಬ್ಬ ತಂದೆ ಹೇಗೆ ತನ್ನೆಲ್ಲಾ ಮಕ್ಕಳಿಗೆ ಕಿಂಚಿತ್ತೂ ಭೇದಭಾವ ತೋರದೆ ಪ್ರೀತಿ ಹಂಚುತ್ತಾನೆಯೋ ಹಾಗೆಯೇ ದೇವರೆನ್ನುವವನು ಇದ್ದರೆ ತನ್ನೆಲ್ಲಾ ಮಕ್ಕಳಾದ ಮಾನವರನ್ನು 'ಇವರು ಭಕ್ತರು, ಇವರು ಭಕ್ತರಲ್ಲ' ಎಂಬ ಯಾವುದೇ ಭೇದಭಾವವಿಲ್ಲದೆ ಪೊರೆಯುವಂತಹವನಾಗಿರುತ್ತಾನೆ" ಎಂದು ಹೇಳುತ್ತಾರೆ.

ಮಾತೃ ದೇವೋಭವ ಎನ್ನುವಂತೆ ಪಿತೃ ದೇವೋಭವ ಎನ್ನಲಾಗುತ್ತದೆ. ತನ್ನನ್ನು ದೈವತ್ವಕ್ಕೆ ಏರಿಸುವುದನ್ನಾಗಲೀ ರಾಮ, ಪರುಶುರಾಮರಂಥ ಪಿತೃಭಕ್ತಿಯನ್ನಾಗಲೀ ಯಾವ ತಂದೆಯೂ ತನ್ನ ಮಕ್ಕಳಿಂದ ಬಯಸುವುದಿಲ್ಲ. ಅವರು ತನ್ನನ್ನು ಒಬ್ಬ ಅಪ್ಪನಂತೆ ಪರಿಗಣಿಸಲಿ ಮತ್ತು ಪ್ರೀತಿಸಲಿ ಎಂದಷ್ಟೇ ಆತ ಬಯಸುವುದು.

ಜಗತ್ತಿನ ಬಹುತೇಕ ತಂದೆಯಂದಿರು ತಮ್ಮ ಮಕ್ಕಳ ಅಭ್ಯುದಯಕ್ಕಾಗಿ ಜೀವ ತೇದಂಥವರು ಮತ್ತು ತೇಯುವಂಥವರೇ ಆಗಿರುತ್ತಾರೆ. ಅಂತಹವರು ತಮ್ಮ ಇಳಿಗಾಲದಲ್ಲಿ ಒಂಟಿಯಾಗಿಯೋ ವೃದ್ಧಾಶ್ರಮದಲ್ಲೋ ಕೊರಗಿ ಕೊರಗಿ ನರಳುವಂತೆ ಮಾಡುವುದು ಯಾವ ಮಕ್ಕಳಿಗೂ ಶ್ರೇಯಸ್ಕರವಲ್ಲ. ಕಡಿಮೆ ತೂಕದ ನವಜಾತ ಶಿಶುಗಳಿಗೆ, ತೂಕದಲ್ಲಿ ಹೆಚ್ಚಳವಾಗುವವರೆಗೂ ತಾಯಿ ಕಾಂಗರೂವಿನಂತೆ ಎದೆಗವುಚಿಕೊಂಡು ದೇಹದ ಶಾಖ ನೀಡುವ ಕ್ರಿಯೆಗೆ 'ಕಾಂಗರೂ ಮದರ್ ಕೇರ್' ಎನ್ನಲಾಗುತ್ತದೆ. ಇದಕ್ಕೆ ತಾಯಿಯನ್ನು ಹೊರತುಪಡಿಸಿದರೆ ತಂದೆಯೇ ಅತ್ಯಂತ ಸೂಕ್ತ ವ್ಯಕ್ತಿ. ಹೀಗೆ ತಂದೆಯ ಮೈ ಬಿಸಿಕಾವು ಪಡೆದು ದೊಡ್ಡವರಾದ ಮಕ್ಕಳು ಆತನ ಕಣ್ಣಿಂದ ಬಿಸಿ ನೀರು ಹನಿಯದಂತೆ ನಿಗಾ ವಹಿಸುವುದೇ ಅವರು ನೀಡುವ ಸರ್ವಶ್ರೇಷ್ಠ ಗೌರವ.

ಪ್ರತಿಕ್ರಿಯಿಸಿ: feedback@sudha.co.in